

## ಕಡೆಗೂ ಒಡೆದ 'ಗಾಜಿನ ಮೇಲ್ಛಾವಣಿ'

# ಸ್ತ್ರೀ ಸೇನಾನಿ

## ಲಿಂಗತಾರತಮ್ಯಕ್ಕೆ ಸುಪ್ರೀಂ ಪ್ರಹಾರ

ಭಾರತೀಯ ಸೇನೆಯಲ್ಲಿ ಕಾಯಂ ಸೇವೆಯ ಹುದ್ದೆಗಳಿಗೆ ಹಾಗೂ ನಾಯಕತ್ವದ ಸ್ಥಾನಗಳಿಗೆ ಮಹಿಳೆಯರಿಗೆ ಇರುವ ಹಕ್ಕನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿದೆ. ಈ ತೀರ್ಪು ಮಹಿಳಾ ಸಮಾನತೆಯ ನಿಟ್ಟಿನಲ್ಲೊಂದು ಬಹು ಮುಖ್ಯವಾದ ನಡೆ. ಮಹಿಳೆಯರ ಸಾಮರ್ಥ್ಯದ ಬಗ್ಗೆ ಸರ್ಕಾರವೇ ಪೂರ್ವಗ್ರಹ ಹೊಂದಿದ್ದರೆ, ಸಾಮಾನ್ಯ ನಾಗರಿಕರಿಂದ ಸಮಾನತೆಯ ಧೋರಣೆಯನ್ನು ನಿರೀಕ್ಷಿಸುವುದು ಕಷ್ಟಸಾಧ್ಯ. ಸರ್ಕಾರ ಸೇರಿದಂತೆ, ಎಲ್ಲ ವಲಯಗಳಲ್ಲಿ ಇರುವ ಪುರುಷಶ್ರೇಷ್ಠತೆಯ ವ್ಯಸನದಿಂದ ಹೊರಬರಲು ಹಾಗೂ ಪ್ರಗತಿಪರ ವಿಚಾರಗಳನ್ನು ಅಳವಡಿಸಿಕೊಳ್ಳಲು ಪ್ರಸಕ್ತ ಸುಪ್ರೀಂ ಕೋರ್ಟ್ ತೀರ್ಪು ಉತ್ತಮ ಅವಕಾಶ ಕಲ್ಪಿಸಿದೆ. ಭಾರತ ಸೇರಿದಂತೆ ವಿಶ್ವದ ವಿವಿಧ ದೇಶಗಳ ಸೇನೆಗಳಲ್ಲಿ ಮಹಿಳೆಯರು ಮೂಡಿಸಿರುವ ಹೆಜ್ಜೆಗುರುತುಗಳನ್ನು ನೆನಪಿಸಿಕೊಳ್ಳುವ 'ಸುಧಾ' ಅಗ್ರಲೇಖನ, ಮಹಿಳಾ ಅಸ್ಮಿತೆಯನ್ನು ಎತ್ತಿಹಿಡಿಯುವುದರ ಜೊತೆಗೆ ಲಿಂಗಸಮಾನತೆಯ ಆರೋಗ್ಯಕರ ಸಮಾಜದ ಆಶಯವನ್ನು ಪ್ರತಿಪಾದಿಸುತ್ತದೆ.

■ ನೇಮಿಚಂದ್ರ

